# ಪ್ರಥಮ ಪಿಯುಸಿ ಮಧ್ಯವಾರ್ಷಿಕ ಪರೀಕ್ಷೆ, ಅಕ್ಟೋಬರ್/ನವೆಂಬರ್ 2024

## ವಿಷಯ : ಕನ್ನಡ (01)

ಸಮಯ : 3 ಗಂಟೆಗಳು ಅಂಕಗಳು : 80

ಸೂಚನೆ :

'ಅ'-ವಿಭಾಗದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

### 'ಅ' – ವಿಭಾಗ

**I** ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **10x1=10**

1. ತಂದೆಗೆ ಜಲಾಂಜಲಿಯನ್ನು ಯಾರು ಕೊಡಬೇಕು ?
   ಅ) ಮಗಳು ಆ) ಮಗ ಇ) ತಾಯಿ ಈ) ಮೊಮ್ಮಗ
2. ಘಟ್ಟಿವಾಳಯ್ಯನ ವಚನಗಳ ಅಂಕಿತ ಯಾವುದು ?
   ಅ) ಗುಹೇಶ್ವರ ಆ) ಕೂಡಲಸಂಗಮದೇವ ಇ) ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಈ) ಚೆನ್ನಮಲ್ಲಿಕಾರ್ಜುನ
3. ಓಹೋ ವಿಚಾರವಿಲ್ಲದೆ ಇಂತು ಮಾಳ್ಪರೇ ಅಹ ನಿಮ್ಮರಸುತನವೆಮ್ಮಲ್ಲಿ ಮಾಳ್ಪರೇ – ಈ ಮಾತಿನಲ್ಲಿ ಅರಸನಾದವನಿಗೆ ಯಾವ ಗುಣವಿರಬೇಕೆಂದು ಶಿವ ಹೇಳುತ್ತಾನೆ ?
   ಅ) ಅಹಂಕಾರ ಆ) ಸಂಯಮ ಇ) ಅಸೂಯೆ ಈ) ದಾನ
4. ಅರಗಿಳಿಗೆ ಯಾವ ಬಣ್ಣವನ್ನು ಬರೆಯಲಾಗಿದೆ ?
   ಅ) ಕೆಂಪು ಆ) ಹಳದಿ ಇ) ಕಪ್ಪು ಈ) ಹಸಿರು
5. ಅಖಂಡ ಕರ್ನಾಟಕದ ಮುಖ್ಯಮಂತ್ರಿ ಯಾರು ?
   ಅ) ರನ್ನ ಆ) ಪಂಪ ಇ) ಹರಿಹರ ಈ) ರಾಘವಾಂಕ
6. ಎಲ್ಲೋ ಬಿದ್ದ ಕಲ್ಲನ್ನು ಕಡೆದು ದೇಗುಲದೊಳಗಡೆ ಇಟ್ಟ ಕೀರ್ತಿ ಶಾಸ್ತ್ರಿಮಾಸ್ತರರಿಗೆ ಸಲ್ಲುವುದೆಂಬ ವಿಚಾರ ನೆನಪು ಬಂದಾಗ ಹಿಂದಿನದೆಲ್ಲಾ ನೆನಪುಗಳು ಮಳೆಯಂತೆ ಸುರಿಯತೊಡಗಿದವು – ಈ ಸಾಲುಗಳಲ್ಲಿ ಲೇಖಕರಿಗೆ ಶಾಸ್ತ್ರಿಮಾಸ್ತರರ ಬಗ್ಗೆ ಇರುವ ಭಾವನೆ ಏನು ?
   ಅ) ಮಾಸ್ತರರ ಬಗ್ಗೆ ಇದ್ದ ಭಯ ಆ) ಮಾಸ್ತರರ ಬಗ್ಗೆ ಗೌರವ
   ಇ) ಆತಂಕ ಈ) ಮಾಸ್ತರರ ಬಗ್ಗೆ ಕೋಪ
7. ಮಾಯಾದೇವಿ ದೇವಾಲಯ ಹೇಗಿತ್ತು ?
   ಅ) ಕೆಂಪುವರ್ಣದ ವೃತ್ತಾಕಾರ ಆ) ಕಪ್ಪುವರ್ಣದ ಚೌಕಾಕಾರ
   ಇ) ಶ್ವೇತವರ್ಣದ ಚೌಕಾಕಾರ ಈ) ನೀಲಿವರ್ಣದ ವೃತ್ತಾಕಾರ
8. ಬೋಳೇಶಂಕರನ ಊರು ಯಾವುದು ?
   ಅ) ಕೈಲಾಸಪುರ ಆ) ಶಿವಾಪುರ ಇ) ಶಂಕರಪುರ ಈ) ಬೋಳಾಪುರ
9. ರಾಜಕುಮಾರಿಗೆ ಬಂದ ರೋಗ ಯಾವುದು ?
   ಅ) ತಲೆನೋವು ಆ) ಬೆನ್ನುನೋವು ಇ) ಕಣ್ಣುನೋವು ಈ) ಹೊಟ್ಟೆನೋವು
10. "ಒಬ್ಬ ಒಳ್ಳೆ ಕೆಲಸ ಮಾಡುವುದು ಪುಣ್ಯದ ತುರಾಯಿಗಳನ್ನು ರುಮಾಲಿಗೆ ಸಿಕ್ಕಿಸಿಕೊಳ್ಳಲಿಕ್ಕೆ ಅಲ್ಲ, ಅದು ಅವನ ಜೀವನ ರೀತಿ ಅಷ್ಟೆ" ಎಂಬ ಮಾತು ಏನನ್ನು ತಿಳಿಸುತ್ತದೆ ?
    ಅ) ನಿಷ್ಕಲ್ಮಷ ಬದುಕನ್ನು ಆ) ಕಲ್ಮಷ ಬದುಕನ್ನು ಇ) ಐಷಾರಾಮಿ ಬದುಕನ್ನು ಈ) ಬಡತನದ ಬದುಕನ್ನು

ಆ) ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ : **1x5=5**

**(ಪಾತಾಳದಲ್ಲಿ, ಕರಿಸಿದ್ದೇಗೌಡ, ಅಂಬವ್ವ, ಖಗೋಳಶಾಸ್ತ್ರದಲ್ಲಿ, ಲಾರ್ಕೋಟ್, ದೆಹಲಿ)**

11. ಹುಡುಗನಿಗೆ ಮಹಾತ್ಮಗಾಂಧಿ ಎಂಬ ಹೆಸರಿಟ್ಟವರು ________
12. ಊರಿನಲ್ಲಿ ನೀರು ಎಲ್ಲಿ ನೆಲೆನಿಂತಿತ್ತು ________
13. ಜ್ಯೋತಿಷ್ಯದ ಉಗಮವು ________ ಕಂಡು ಬರುತ್ತದೆ.
14. ಶಾಸ್ತ್ರಿಮಾಸ್ತರರ ಹೆಂಡತಿ ಹೆಸರು ________
15. ಕಪಿಲವಸ್ತುವಿನ ಇಂದಿನ ಹೆಸರು ________

(ಪು.ತಿ.ನೋ)

ಇ. ಹೊಂದಿಸಿ ಬರೆಯಿರಿ: 1x5=5

| | | |
|---|---|---|
| 16. ಅ) ದುರ್ಯೋಧನ ವಿಲಾಪ | – | ಗ) ಹರಿಹರ |
| ಆ) ರಗಳೆಯ ಕವಿ | – | ಎ) ಕುವೆಂಪು |
| ಇ) ಕೀರ್ತನೆಗಳು | – | ಖ) ಬಿ. ಸಿ. ರಾಮಚಂದ್ರಶರ್ಮ |
| ಈ) ಅಖಂಡ ಕರ್ನಾಟಕ | – | ಘ) ಕನಕದಾಸ |
| ಉ) ಎಂದಿಗೆ | – | ಙ) ರನ್ನ |
| | | ಚ) ರಾಘವಾಂಕ |

'ಆ' – ವಿಭಾಗ

II ಅ. ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 3x2=6

17. ಕಣ್ಣು ಹಾಗೂ ಕರ್ಣಗಳಿಗೆ ಶೃಂಗಾರ ಯಾವುದು ?
18. ಮಾದೇವ ತನ್ನ ಶಿಶು ಮಕ್ಕಳಿಗೆ ಏನನ್ನು ನೀಡಿ ಸಲಹಿದನು ?
19. ಸರಸ್ವತಿಯು ರಚಿಸಿದ ಸಚಿವ ಮಂಡಲದ ಸದಸ್ಯರು ಯಾರು ?
20. ನಾಡ ಮಂದಿಗೆ ಯಾವುದರ ಬಲ ಮತ್ತು ಮಹಿಮೆಯಿಂದ ಬಿಡುಗಡೆಯಾಗಿದೆ ?

ಆ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x2=4

21. ರಾಗಿಯಲ್ಲಿ ಯಾವ ರೋಗಗಳನ್ನು ತಡೆಯಬಲ್ಲ ಗುಣವಿದೆ ?
22. ಜ್ಯೋತಿಷ್ಯದ ಪ್ರಕಾರ ಗ್ರಹಗಳೆಷ್ಟು ? ಅವುಗಳು ಯಾವುವು ?
23. ನೇಪಾಳದ ವೈಮಾನಿಕ ಸಾರಿಗೆ ವ್ಯವಸ್ಥೆ ಹೇಗಿದೆ ?
24. ಮಾಸ್ತರರು ಬಾಡಿಗೆ ಮನೆಯನ್ನು ಹೇಗೆ ಖರೀದಿಸಿದ್ದರು ?

ಇ. ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 3x2=6

25. ಸೈತಾನನು ಮೂರು ಪಿಶಾಚಿಗಳನ್ನು ಭೂಲೋಕಕ್ಕೆ ಕಳುಹಿಸಿದ್ದು ಏಕೆ ?
26. ಕೋಡಂಗಿಯು ತಾನು ಬೆಳಿಗ್ಗೆಯಿಂದ ಏನೇನು ಕೆಲಸ ಮಾಡಿದೆನೆಂದು ಹೇಳುತ್ತಾನೆ ?
27. ರಾಜಕುಮಾರಿಯ ಹೊಟ್ಟೆನೋವು ವಾಸಿ ಮಾಡುವವರಿಗೆ ಏನೇನು ಬಹುಮಾನ ಕೊಡುವುದಾಗಿ ಡಂಗೂರ ಸಾರಿಸುತ್ತಾರೆ ?
28. ಪಿಶಾಚಿಗಳು ಯಾವುದರಿಂದ ನಾಣ್ಯ ಮತ್ತು ಸಿಪಾಯಿಗಳನ್ನು ಮಾಡಿಕೊಡುತ್ತವೆ ?

'ಇ'–ವಿಭಾಗ

III ಅ. ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ–ಸ್ವಾರಸ್ಯ ಬರೆಯಿರಿ. 2x3=6

29. ಕಾವೇರಿ ಸೋಂಕಿದರೆ ಪಾಪಮಂ ಸೋವೇರಿ
30. "ಹಲುಬಿದರ್ ಕಲ್ಮರಂ ಕರಗುವಂತೆ"
31. "ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ"

ಆ. ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ–ಸ್ವಾರಸ್ಯ ಬರೆಯಿರಿ. 1x3=3

32. "ಬುದ್ಧನೇ ಇಲ್ಲದ ಅರಮನೆಗೊಬ್ಬ ಗಾರ್ಡು!"
33. "ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ"
34. "ತುಟಿ ಬಣ್ಣ ಕೆಡದಂತೆ ಚಮಚೆಯಲ್ಲಿ ತಿನ್ನುವ ಚೆಲುವೆಯರು"

ಇ. ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ–ಸ್ವಾರಸ್ಯ ಬರೆಯಿರಿ. 1x3=3

35 "ಬ್ಯಾಂಕಿನಲ್ಲಿ ಕೂಡಿಸಿಟ್ಟು ಮದುವೆ ಆದಮೇಲೆ ಹೆಂಡತಿಗೆ ಕೊಡ್ತೀನಿ"
36. ಒಂದು ಹೊತ್ತು ರೊಟ್ಟಿ ತಿನ್ನದಿದ್ದರೆ ನಾನೇನು ಸಾಯುವುದಿಲ್ಲ.

'ಈ'–ವಿಭಾಗ

IV ಅ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 2x4=8

37. ದುರ್ಯೋಧನನು ದುಶ್ಯಾಸನನನ್ನು ಕಂಡು ವ್ಯಕ್ತಪಡಿಸಿದ ಭಾವನೆಗಳಾವುವು ?
38. ಕಾಡಿನಲ್ಲಿ ಸೀತೆಯನ್ನು ರಕ್ಷಿಸುವ ಜವಾಬ್ದಾರಿಯನ್ನು ಲಕ್ಷ್ಮಣನು ಯಾರಿಗೆ ವಹಿಸುತ್ತಾನೆ ?
39. ನಾಡ ಜನರ ಗತವೈಭವದ ಕನಸನ್ನು ಕವಿ ಹೇಗೆ ವಿಡಂಬಿಸಿದ್ದಾರೆ ? ವಿವರಿಸಿ.

40. ಈ ಪದ್ಯಭಾಗವನ್ನು ಅರ್ಥೈಸಿಕೊಂಡು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ:

ಅಡವಿಯೊಳಗಾಡುವ ಮೃಗಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೊ
ಪಡೆದ ಜನನಿಯ ತೆರದಿ ಸ್ವಾಮಿ ಹೊಣೆಗೇಡಾಗಿ
ಬಿಡದೆ ರಕ್ಷಿಪನು ಇದಕೆ ಸಂಶಯವಿಲ್ಲ.

ಅ) ಮೃಗಪಕ್ಷಿಗಳು ಎಲ್ಲಿ ಆಡುತ್ತಿದ್ದವು ? (01)

ಆ) ಯಾವ ತೆರದಿ ಸ್ವಾಮಿ ನಮ್ಮನ್ನು ಬಿಡದೆ ರಕ್ಷಿಸುವನು ? (01)

ಇ) ಎಲ್ಲವನ್ನು ರಕ್ಷಿಸುವ ದೇವರು ನಮ್ಮನ್ನೂ ರಕ್ಷಿಸುತ್ತಾನೆ ಎಂಬ ಹೇಳಿಕೆಯನ್ನು ಸಮರ್ಥಿಸಿ. (02)

**ಆ. ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ** **1x4=4**

41. ಜ್ಯೋತಿಷ್ಯ ಅರ್ಥಪೂರ್ಣವೋ ? ಅರ್ಥರಹಿತವೋ ? ವಿಶ್ಲೇಷಿಸಿ.
42. ಕಪಿಲವಸ್ತುವಿನಲ್ಲಿ ಲೇಖಕರ ನಿರಾಸೆಗೆ ಕಾರಣವೇನು ?

**ಇ. ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ** **1x4=4**

43. ಬೋಳೇಶಂಕರನು ನಾಣ್ಯ ಹಾಗೂ ಸೈನಿಕರನ್ನು ಪಡೆದ ಪ್ರಸಂಗವನ್ನು ವಿವರಿಸಿ.
44. ಸೈನಿಕರು ಹಾಡಿದ ಸಿಟಿ ಹಾಡಿನ ಸಾರಾಂಶವೇನು ?

## ಉ–ವಿಭಾಗ

## (ಭಾಷಾಭ್ಯಾಸ)

**V ಅ. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.** **4x2=8**

45. **ಕೆಳಗಿನ ಎರಡು ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**
ಕನಸು, ಉನ್ನತಿ, ಜಾತ
46. **ಕೆಳಗಿನ ಎರಡು ಪದಗಳನ್ನು ಬಿಡಿಸಿ ಬರೆಯಿರಿ.**
ಕಸವರಗಲಿ, ರಾವಣಾರಿ, ಬೆಳ್ಗೊಡೆ
47. **ಕೆಳಗಿನ ಎರಡು ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ.**
ಅಗ್ನಿ, ರಕ್ತ, ಕಣ್ಣು
48. **ಅನ್ಯದೇಶ್ಯ ಪದಗಳಿಗೆ ಎರಡು ಉದಾಹರಣೆ ಕೊಡಿ.**
49. **ಕೆಳಗಿನ ಎರಡು ಪದಗಳ ತದ್ಭವ ರೂಪ ಬರೆಯಿರಿ.**
ಪ್ರಸಾದ, ವಿದ್ಯೆ, ಆಶ್ಚರ್ಯ
50. **ಕೆಳಗಿನ ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**
ಮುಗಿಬೀಳು, ಕಣ್ಣರಳಿಸು, ಮೊರೆಯಿಡು
51. **ಆ. ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ.** **1x4=4**
ಪುಸ್ತಕಗಳ ಮಹತ್ವ

**ಅಥವಾ**

ಪದವಿಪೂರ್ವ ಹಂತದ ಶೈಕ್ಷಣಿಕ ಸಮಸ್ಯೆಗಳು

**ಇ. ಯಾವುದಾದರೂ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ.** **1x4=4**

52. ಸುಂದರ್ / ಸುಮತಿ, ಪ್ರಥಮ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ತುಮಕೂರು ವಿಳಾಸದಲ್ಲಿರುವವರು ನೀವೆಂದು ಭಾವಿಸಿ ಸೋಮಶೇಖರ, ನಂ. ೧೧೧೮, ಕಾರಂತ ಬಡಾವಣೆ, ೧ನೇ ಮುಖ್ಯ ರಸ್ತೆ, ಲಕ್ಷ್ಮೀಪುರ, ಬೆಂಗಳೂರು ಈ ವಿಳಾಸದಲ್ಲಿ ವಾಸವಿರುವ ನಿಮ್ಮ ತಂದೆಗೆ ಪ್ರವಾಸಕ್ಕೆ ಹೋಗಲು ಹಣ ಮತ್ತು ಅನುಮತಿ ಕೋರಿ ಪತ್ರ ಬರೆಯಿರಿ.

**ಅಥವಾ**

ರಮೇಶ / ರಮ್ಯ, ಪ್ರಥಮ ಪಿಯುಸಿ, ಚೇತನ ಪದವಿ ಪೂರ್ವ ಕಾಲೇಜು, ಬೆಂಗಳೂರು ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ನಿಮ್ಮ ಅಣ್ಣನ ಮದುವೆಗೆ ಹೋಗಲು ಮೂರು ದಿನ ರಜೆ ಕೋರಿ ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೆ ಪತ್ರ ಬರೆಯಿರಿ.

*****